ಪದವಿ ನಂತರ ನಿರ್ದೇಶಕ ಬಿ. ಸುರೇಶ ಅವರ ಬಳಿ 'ದೇವರ ನಾಡಲ್ಲಿ' ಸಿನಿಮಾಗೆ ಸಹಾಯಕ ನಿರ್ದೇಶಕನಾಗಿ ಸೇರಿದೆ. ಎರಡನೇ ಸಿನಿಮಾ ಯೋಗರಾಜ್ ಭಟ್ ಅವರ ಜೊತೆ. 'ದನ ಕಾಯೋನು' ಸಿನಿಮಾ ನಂತರ 'ಮುಗುಳುನಗೆ', 'ಗಾಳಿಪಟ 2', 'ಪಂಚತಂತ್ರ', 'ಕರಟಕ ದಮನಕ', 'ಮನದ ಕಡಲು', ಹೀಗೆ ಒಂದಿಷ್ಟು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ನಿರ್ದೇಶನದ ಪಟ್ಟುಗಳನ್ನು ಕಲಿತೆ. ಸಹಾಯಕ ನಿರ್ದೇಶನದಿಂದ ಸಹ ನಿರ್ದೇಶನದವರೆಗೆ ಅನುಭವಗಳನ್ನು ಪಡೆದುಕೊಂಡೆ. 'ಉಡಾಳ' ಮೂಲಕ ಸ್ವತಂತ್ರ ನಿರ್ದೇಶನಕ್ಕೆ ಇಳಿದಿದ್ದೇನೆ.

◆ **ಯೋಗರಾಜ ಭಟ್ಟರೊಂದಿಗೆ ಕೆಲಸ ಮಾಡಿದ ಅನುಭವ?**

ಭಟ್ಟರು ಸಿನಿಮಾ ಎಂದರೆ ಹೀಗೆ– ಹಾಗೆ ಎಂದು ಪಾಠ ಹೇಳಿಕೊಟ್ಟವರಲ್ಲ. ಕೆಲಸ ಮಾಡುವಾಗ ನಮ್ಮಿಂದ ಅವರು ಏನನ್ನೂ ನಿರೀಕ್ಷೆ ಮಾಡುವುದಿಲ್ಲ. ಅವರ ಕೆಲಸ ಅವರು ಮಾಡುತ್ತಿರುತ್ತಾರೆ. ಹೇಳದೆಯೇ ಹೇಳಿಕೊಡುವ ಕಲೆ ಅವರದ್ದು. ಅದು ಅವರ ಕೆಲಸದ ಪ್ಯಾಟರ್ನ್.

◆ **ಯಾವ ರೀತಿಯ ಸಿನಿಮಾಗಳನ್ನು ಜನರಿಗೆ ನೀಡುವ ಹಂಬಲವಿದೆ?**

ಸಿನಿಮಾ ಮನರಂಜನೆ ನೀಡಬೇಕು. ಸಿನಿಮಾ ನೋಡಲು ಬಂದವರು ನಗಬೇಕು, ಪಾತ್ರಗಳೊಂದಿಗೆ ಅವರೂ ಒಂದಾಗುತ್ತಾ ಸಾಗಬೇಕು. ಸಿನಿಮಾ ಮುಗಿಯುತ್ತಿದ್ದಂತೆ ಅವರ ಮುಖದಲ್ಲಿ ಒಂದು ಖುಷಿ, ತೃಪ್ತಿ ಕಾಣಬೇಕು. ಈ ದಿಕ್ಕಿನಲ್ಲಿ ನನ್ನ ಪ್ರಯತ್ನ ಮುಂದುವರೆಸಿದ್ದೇನೆ.

◆ **ನೀವು ಕಂಡಂತೆ ನಿರ್ದೇಶಕನಿಗಿರಬೇಕಾದ ಬಹುಮುಖ್ಯ ಟೂಲ್ ಯಾವುದು?**

ಅಂತಃಪ್ರಜ್ಞೆ. ನಿರ್ದೇಶಕನಾದವನು ಒಂದು ಕಥೆ ಯೋಚನೆ ಮಾಡಿದಾಗ ಅವನ ಮನದಲ್ಲಿ ಏನೋ ಒಂದು ಹೊಳೆಯುತ್ತದೆ. ಅವನ ಆಲೋಚನೆಗೆ ಹೊರಗೆ ನೂರಾರು ಅಭಿಪ್ರಾಯಗಳು ಬರುತ್ತವೆ. ಇವೆಲ್ಲವನ್ನೂ ಮೀರಿ ನಿರ್ದೇಶಕನ ಮನಸ್ಸಿನಲ್ಲಿ ಏನು ಗಟ್ಟಿಯಾಗಿ ಉಳಿಯುತ್ತದೋ ಅದು ವರ್ಕೌಟ್ ಆಗುತ್ತದೆ. ಮನದ ಮಾತನ್ನು ಕೇಳುವುದೇ ನಿರ್ದೇಶಕನ ಬಹುಮುಖ್ಯ ಸಾಧನ.

◆ **'ಉಡಾಳ' ನಂತರ...**

ಉತ್ತರ ಕರ್ನಾಟಕ ಭಾಗದ ಕಥೆಯ ಇನ್ನೊಂದು ಸಿನಿಮಾ ಮಾಡಬೇಕು ಎಂಬ ಆಸೆ ಇದೆ. ಬಗೆದಷ್ಟೂ ಹೇಳಲುಳಿಯುವ, ಹೇಳಬೇಕಾದ ಹಲವು ವಿಷಯಗಳು ಅಲ್ಲಿವೆ. ಮಲೆನಾಡ ಸೀಮೆಯ ಕಥೆ ಲೈನ್‌ಅಪ್‌ನಲ್ಲಿದೆ. ಬೇರೆ ರೀತಿಯ ಕಥೆಗಳಿಗೂ ತಯಾರಿ ನಡೆಯುತ್ತಿದೆ. ■





# ಕಾಮಿಡಿ ಕಥೆಯಲ್ಲಿ ಕಾರ್ತಿಕ್

'ಬಿಗ್ ಬಾಸ್ 10' ರಿಯಾಲಿಟಿ ಶೋ ವಿಜೇತ ಕಾರ್ತಿಕ್ ಮಹೇಶ್, ಕಿರುತೆರೆಯಲ್ಲಿ ಗೆಲುವು ಕಂಡ ನಂತರ ಹಿರಿತೆರೆಯಲ್ಲಿ ಹಲವು ಅವಕಾಶಗಳು ಅರಸಿಕೊಂಡು ಬರುತ್ತಿವೆ. ಅಷ್ಟೇ ಅಲ್ಲ, ಒಂದಕ್ಕಿಂತ ಒಂದು ಭಿನ್ನ ಧಾಟಿಯ ಸಿನಿಮಾಗಳು ಸಿಗುತ್ತಿದ್ದು, ಈ ಪ್ರಯೋಗಗಳನ್ನು ಅವರು ಕುತೂಹಲ, ಉತ್ಸುಕತೆಯಿಂದ ಸ್ವೀಕರಿಸುತ್ತಿದ್ದಾರೆ. ಬಹು ವಿಧದ ಪಾತ್ರಗಳಿಂದ ತಮ್ಮನ್ನು ಉತ್ತಮ ಕಲಾವಿದನಾಗಿ ರೂಪಿಸಿಕೊಳ್ಳುವ ಹಾದಿಯಲ್ಲಿದ್ದಾರೆ.

ಸದ್ಯ ಪನ್ನಗಾಭರಣ ಅವರೊಂದಿಗೆ ಹಾಸ್ಯಪ್ರಧಾನ ಸಿನಿಮಾಗೆ ಕೈ ಜೋಡಿಸಿದ್ದು, ಈ ಸಿನಿಮಾ ಮೂಲಕ ಹೊಸ ಪಾತ್ರವೊಂದಕ್ಕೆ ಶಿಫ್ಟ್ ಆಗಿದ್ದಾರೆ.

'ಪನ್ನಗಾಭರಣ ಅವರೊಂದಿಗೆ ನನ್ನ ಮುಂದಿನ ಸಿನಿಮಾ ಬೇರೆಯದೇ ರೀತಿಯದ್ದು, ಅದು ಕಾಮಿಡಿ. ನಾನು ಮೂಲತಃ ಹಾಸ್ಯಪ್ರವೃತ್ತಿಯ ವ್ಯಕ್ತಿ. ಕಾಮಿಡಿ ನೋಡುವುದನ್ನು ಎಂಜಾಯ್ ಮಾಡುತ್ತೇನೆ. ಈ ಕಥೆಯನ್ನು ಕೇಳಿದಾಗ, ಇದರಲ್ಲಿ ಏನೋ ಒಂದು ಸೆಳೆತ ಇದೆ ಅನ್ನಿಸಿತು. ಇದು ನನಗೆ ಒಪ್ಪುತ್ತದೆ ಎಂದೂ ಅನಿಸಿತು. ಈ ಸಿನಿಮಾದಲ್ಲಿ ಎರಡು ಪ್ರಮುಖ ಪಾತ್ರಗಳಿದ್ದು, ಅದರಲ್ಲಿ ನನ್ನ ಪಾತ್ರವೂ ಒಂದು' ಎಂದು ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ಸಿನಿಮಾ ಶೂಟಿಂಗ್ ಆರಂಭಿಸಲು ಯೋಜನೆ ರೂಪಿಸಲಾಗಿದೆ. ಗ್ರೀಸ್‌ನಲ್ಲಿ 40 ದಿನಗಳ ಕಾಲ ಶೂಟಿಂಗ್ ನಡೆಯಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ.

'ಈ ಸಿನಿಮಾ ಪನ್ನಗಾ ಅವರ ನಿರ್ದೇಶನದ ಅತ್ಯುತ್ತಮ ಸಿನಿಮಾ ಆಗಲಿದೆ' ಎಂದೂ ಭರವಸೆ ವ್ಯಕ್ತಪಡಿಸಿದ್ದಾರೆ ಕಾರ್ತಿಕ್. 'ಆಲ್ಫಾ', 'ರಿಚಿ ರಿಚ್', 'ರಾಮ ರಸ'... ಹೀಗೆ ಹಲವು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದಾರೆ. ■